doc-205
T-P-

Regd No M 1299 34 th Year ತಾ॥ 5—6—51

SATYAVADI

ಸತ್ಯವಾದಿ

ಸಾಪ್ತಾಹಿಕರು- ಅರಮನೆ ಸಿರಸ್ತೆದಾರ್ ಎಂ. ಸಿ. ಸುಬ್ರಾಯರು [ಬಿಡಿ-ಪ್ರತಿ 3 ಪೈ

ಕಾಶ್ಮೀರ ಮಧ್ಯಸ್ಥಿಕೆಗಾರನಿಗೆ ಭಾರತದ ಸಹಕಾರವಿಲ್ಲ !

— ಪಂ. ನೆಹರು ಹೇಳಿಕೆ —

ಬೇಗ ಅಶ್ವರ್ಥವಾಗಲಿ

ಭಾರತ ಪಾರ್ಲಿಮೆಂಟಿನಲ್ಲಿ ಸಚಿವ ಶ್ರೀಕೆ ಎಂ ಮುನಷಿಯವರು ಗೋರಕ್ಷಣ ಮಸೂದೆ ಮಂಡಿಸಿದ್ದು ಸೂಚಿ ಸಮಿತಿಗೆ ಹೋಯಿತು ಅ ಒಗ್ಗೆ ಸಚಿವರು ಮಾತನಾಡುತ್ತಾ, ಇನ್ನೊಂದು ವಾರದಲ್ಲಿಯೇ ಸೂಚನೆ ತಿ ಪಂದಿ ಒಪ್ಪಿಸಿ ಈ ಸಮಾವೇಶದಲ್ಲಿಯೇ ಅ ಒಗ್ಗೆ ತೀರ್ಮಾನವಾಗಬೇಕೆಂಬುದು ತಮ್ಮ ಅ ಶಯ – ಎಂದರು.

ಊಟಿಯಲ್ಲಿ ಭಜನೆ

ಪೋರ್ಬಂದರು ಪ್ರಭುಗಳವರ ಘನ ಸಮ್ಮುಖದಲ್ಲಿ ಮಾರ್ಚ್ ಹಿಂದೂ ಹೊಟೇಲಿನ ಮಾಲೀಕರಾದ ಶ್ರೀ ಕೆ. ಸೀತಾರಾಮಯ್ಯನವರು ಊಟಿಯ ತನ್ನ ದಾಸ ಪ್ರಕಾಶ ಗೀತಾ ಮಂದಿರದಲ್ಲಿ ಭಜನೆ ಸಮಾರಂಭವನ್ನು ವೈಭವದಿಂದ ನೆಂವೇರಿಸಿದರು.

ಬೇಗನೆ ವ್ಯವಸ್ಥೆ

ನೇಪಾಳದಲ್ಲಿ ಶಾಂತಿ ನೆಲಸಿ ಪರಿಸ್ಥಿತಿ ಸುಧಾರಿಸಿರುವುದರಿಂದ ರಾಜ್ಯಾಂಗ ರಚನಾ ಸಭೆ ತ್ವರಿತವಾಗಿ ವ್ಯವಸ್ಥೆ ಆಗಲಿದೆ.

ಕುಮಾರಸ್ವಾಮಿಗೆ ಪತ್ರ

ಪಂ॥ ನೆಹರು ವದರಿಸು ಮುಖ್ಯಸಚಿವ ಶ್ರೀ ಕುಮಾರಸ್ವಾಮಿರಾಜಾರವರಿಗೆ ಪತ್ರ ಬರೆದ ನೀವೇ ಆಹಾರ ಖಾತೆಯನ್ನು ವಹಿಸಿಕೊಳ್ಳಿರಿ ಎಂದು ತಿಳಿಸಿರುವುದಾಗಿ ವರದಿಯಾಗಿದೆ.

ಈ ವರ್ಷದ ಪ್ರಗತಿ

ಎಂಟು ಸಹಸ್ರಕ್ಕೆ ಮಿಗಿ ಅಂಚೆ ಕಚೇರಿಗಳನ್ನು ಈ ವರ್ಷ ಹಳ್ಳಿಗಾಡು ಪ್ರದೇಶಗಳಲ್ಲಿ ಅಂಚೆ ಕಚೇರಿಗಳನ್ನು ಸ್ಥಾಪಿಸಲು ಭಾರತ ಸರ್ಕಾರ ನಿರ್ಧರಿಸಿ ಮಾಡಿದೆಯೆಂಬ ವಾರ್ತೆ ಬಂದಿದೆ.

ಶಸ್ಯದ ತಿರಸ್ಕಾರ

ಮುಂದಿನ ತಿಂಗಳು ನಡೆಯಬೇಕೆಂದು ಸೂಚಿತವಾದ ನಾಲ್ಕು ಮಹಾ ರಾಜ್ಯಗಳ ಪರಿಷತ್ತಿನಲ್ಲಿ ಭಾಗವಹಿಸುವುದಿಲ್ಲವೆಂದು ರಷ್ಯ ತಿಳಿಸಿರುವುದಾಗಿ ಪ್ಯಾರಿಸ್ ವಾರ್ತೆ

ಪರ್ಷಿಯಾ ಸರ್ಕಾರವಾಂಗ್ಲೋ ಇರಾನಿಯನ್ ಎಂಬ ಸಂಸ್ಥೆ ಇವುಗಳಿಗೆ ಮಾತ್ರ ಎಂಬ ಕಲಹ ಸಂಬಂಧಪಟ್ಟು ಹೆಂಬ ಪರ್ಷಿಯಾ ಸರ್ಕಾರದ ಹೇಳಿಕೆಯನ್ನು ಬ್ರಿಟೀಷ್ ವಿದೇಶ ಸಚಿವ ಹರ್ಬರ್ಟ್ ಮೊರಿಸನ್ ಅಂಗೀಕರಿಸಿಲ್ಲವೆಂದು ಅಂಡನ್ ವಾರ್ತೆ.

ರಾಜೀನಾಮೆ

ಅಖಿಲ ಭಾರತ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ ಶ್ರೀ ರಾಜೇಶ್ವರರಾಯರು ರಾಜೀನಾಮೆ ಕೊಟ್ಟಿರುವುದಾಗಿ ಬೊಂಬಾಯಿ ವರದಿ ತಿಳಿಸುತ್ತದೆ.

ಅನ್ನವಿಲ್ಲದೆ ಸಾವು

9 ಮಂದಿ ಅನ್ನವಿಲ್ಲದೆ ಪೂರ್ವ ನೇಪಾಳದ ಬಾರಾ ಜಿಲ್ಲೆಯಲ್ಲಿ ಸತ್ತಿರುವರು.

ಮಹಿಳೆಯರಿಂದ ಪ್ರದರ್ಶನ

15 ಮಂದಿ ಮಹಿಳೆಯರು ಖಟ್ಮಂಡು ಅರಮನೆ ಎದುರು ಭಾರತ ಪಂಚೇರರ ಬಿಡುಗಡೆಗೋಸ್ಕರ ಪ್ರದರ್ಶನ ಮಾಡಿದರು ಶ್ರೀ ಪಂಚೇರರು ಗೂರ್ಖಾದಳದ ಕಾರ್ಯದರ್ಶಿಯ ಮಗ.

ಬಿಹಾರಿಗೆ ಹೋದ ಧಾನ್ಯ

ಕಳೆದ ತಿಂಗಳಿನಲ್ಲಿ ಬಿಹಾರಿಗೆ ಒಂದು ಲಕ್ಷದ ಏಳು ಸಾವಿರ ಟನ್ ಧಾನ್ಯ ಕಳಿಸಲಾಯಿತೆಂದು ದೆಹಲಿ ವಾರ್ತೆ.

ವೆಲ್ಲೋಡಿ ಭೂಷಣ

ತಪ್ಪುಗಳೆಲ್ಲವುಗಳ ಹೊಣೆಯನ್ನು ಸರ್ಕಾರದ ಮೇಲೆ ಹೊರಿಸುವದು ಸರಿ ಆದುದಲ್ಲವೆಂದು ಹೈದರಾಬಾದಿನ ಮುಖ್ಯ ಸಚಿವ ಶ್ರೀ ವೆಲ್ಲೋಡಿಗಳು ಮೊನ್ನೆ ಉಡಕಮಂಡಲದಲ್ಲಿ ಬಹಿರಂಗ ಸಭೆಯಲ್ಲಿ ಭಾಷಣ ಮಾಡುತ್ತಾ, ತಿಳಿಸಿರುವರು. ಜನರು ಕೂಡಿ ಕಳ್ಳಭಟ್ಟಿ ನಾಶ ಮಾಡಲು ಸರ್ಕಾರದೊಡನೆ ಸಹಕರಿಸಬೇಕೆಂದು ಅವರು ತಿಳಿಸಿರುವರು.

ವಿರುದ್ಧ ಟೀಕಿಸುತ್ತಿವೆ

ಕಾಶ್ಮೀರ ಸಮಸ್ಯೆ ಕರಿತೇ ಆಸ್ಟ್ರೇಲಿಯಾ ಪತ್ರಿಕೆಗಳು ಭಾರತದ ವಿರುದ್ಧ ಟೀಕೆಗಳನ್ನು ಮಾಡುತ್ತಿರುವದಾಗಿ ಭಾರತ ಪಾರ್ಲಿಮೆಂಟಿನಲ್ಲಿ ಡಾ॥ ಕೇಸ್ಕರ್ ನಿನ್ನೆ ತಿಳಿಸಿದ್ದಾರೆ

ಈ ಸಲ ತರಿಸುವ ಪೆಟ್ರೋಲು

ಈ ವರ್ಷ ಭಾರತ 23 ಕೋಟಿ 70 ಲಕ್ಷ ಗ್ಯಾಲನ್ ಪೆಟ್ರೋಲನ್ನು ವಿದೇಶಗಳಿಂದ ತರಿಸುವದೆಂದು ದೆಹಲಿ ವಾರ್ತೆ.

ಶ್ರೀನಗರದಲ್ಲಿ ನೆಹ್ರು ಮುಡಿ

ಮಧ್ಯಸ್ಥಿಕೆಗಾರನನ್ನು ಸುಸ್ವಾಗತಿಸುತ್ತೇವೆ. ಅಭಿಪ್ರಾಯವನ್ನೆಲ್ಲ ವಿಮರ್ಶಿಸುತ್ತೇವೆ. ಆದರೆ ಎತ್ತಭದ್ರತಾ ಸಮಿತಿ ನಿರ್ಣಯವನ್ನು ಜಾರಿಗೆ ತರುವ ವಿಷಯದಲ್ಲಿ ಯಾವುದೇ ವಿಧದಲ್ಲಿ ಸಹಪಧ್ಯಸ್ಥಿಕೆಗಾರನೊಡನೆ ಸಹಕರಿಸುವುದಿಲ್ಲ ನಿರ್ಣಯವನ್ನು ನಾವು ಒಪ್ಪಿಲ್ಲ ಎಂದು ಪಂ॥ ನೆಹರು ನಿನ್ನೆ ಸಂಜೆ ಶ್ರೀನಗರದಲ್ಲಿ ಒಂದು ಲಕ್ಷ ಕಾಶ್ಮೀರಿಗಳ ಸಭೆಯಲ್ಲಿ ತಿಳಿಸಿದರು. ನಿಮ್ಮೊಡನೆ ಏನೇ ಆದರೂ ನಾವು ನಿಲ್ಲುವೆವು ಎಂದು ಪಂ॥ ನೆಹರು, ಭಾರತದ ಭರವಸೆಯನ್ನು ಪುನಃ ತಿಳಿಸಿದರು. ಕಾಶ್ಮೀರ ಘಟನಾ ಸಮಿತಿಗೆ ಭಾರತದ ಬೆಂಬಲವಿರುವದಾಗಿ ಅವರು ತಿಳಿಸಿದರು.

ಮದ್ರಾಸಿಗೆ ಬೇಕಿದೆ

ಮೂರು ಲಕ್ಷದ ಇಪ್ಪತ್ತು ಸಹಸ್ರ ಬ್ಯಾಲೆಟ್ ಪೆಟ್ಟಿಗೆಗಳು ಮಹಾ ಚುನಾವಣೆಗಾಗಿ ಮದ್ರಾಸು ಪ್ರಾಂತ್ಯಕ್ಕೆ ಅಗತ್ಯವಿದೆ.

ಸಚಿವರ ಮೇಲೆ ದರೋಡೆ

ಬೊಂಬಾಯಿ ಹಣಕಾಸಿನ ಸಚಿವರನ್ನು ನಿನ್ನೆ ಬೆಳಿಗ್ಗೆ ಗಾಳಿ ಸೇವನೆ ತೀರಿಸಿ ವಾಪಸಿಗೆ ಬರುತ್ತಿದ್ದಾಗ ಇಬ್ಬರು ದರೋಡೆ ಮಾಡಿ ಕನ್ನಡಕ, ಭಂಗಾರದ ಗುಂಡಿ ಮುಂತಾದುವನ್ನು ಕಿತ್ತುಕೊಂಡಿರುವರು. ಈ ಸಂಬಂಧದಲ್ಲಿ 10 ದಸ್ತಗಿರಿಗಳಾಗಿವೆ.

ಕಲ್ಕತ್ತಾದ ಕಾರ್ ಆಸ್ಪತ್ರೆಯ ಐನೂರು ಮಂದಿ ಕಾರ್ಮಿಕರು ವೇತನ ಹೆಚ್ಚಳ ಬೇಡಿಕೆ ಹಾಕಿದ್ದಾರೆ.

ಚುನಾವಣೆ ಘೋಷಣೆ ತಯಾರಿಸಲು ದೆಹಲಿಯಲ್ಲಿ 12 ನೇ ತಾ॥ ಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಮಾವೇಶವಾಗುತ್ತದೆ.

ವಾರ್ತೆಗಳು

ನಾಗಪುರ— 1942 ರಲ್ಲಿ ಗಾಯಗೊಂಡ ಮತ್ತು ಸತ್ತುಬಿದ್ದ ರಾಜಕೀಯ ಸಂತ್ರಸ್ತರಿಗೆ ಪರಿಹಾರ ಕೊಡಲು ಕಾನ್ಸಿಲ್ಲು ಒಪ್ಪಿದೆಯೆಂದೂ, ಈ ಬಗ್ಗೆ 2 ಲಕ್ಷ ರೂ. ವ್ಯಯಮಾಡಲಾಗುವುದೆಂದೂ ಪ್ರೆಸ್ ನೋಟು ತಿಳಿಸುತ್ತದೆ

ಬೆಂಗಳೂರು— ವಿಧ್ಯಾಪಟ್ಟಣ ತಾಲ್ಲೂಕು ತಾವಂದೂರು ಕೆರೆ ಕೆಳಗಿನ ಗದ್ದೆಗಳಲ್ಲಿ ಕಮ್ಮಿ ಮಳೆಯಿಂದ ಬೆಳೆ ನಷ್ಟಕ್ಕೊಳಗಾದವರಿಗೆ ಅರ್ಧ ಕಂದಾಯ ಮಾಫಿ ಮಾಡಲಾಗಿದೆಯೆಂದು ಸರ್ಕಾರಿ ಪ್ರೆಸ್ ನೋಟು ತಿಳಿಸುತ್ತದೆ.

ಪಂಜಾಬ್ ಮಂತ್ರಿಮಂಡಲ ಬಿಕ್ಕಟ್ಟಿನಲ್ಲಿ ಕೇಂದ್ರ ಕಾಂಗ್ರೆಸ್ ಪಾರ್ಲಿಮೆಂಟರಿ ಪಕ್ಷ ಸೂಚನೆ ನೀಡಿಲ್ಲವೆಂದು ದೆಹಲಿ ವಾರ್ತೆ.

ಬೆಳಗಾಂ— ಬೆಳಗಾಂ ಜಿಲ್ಲೆಯ ಮುನವಳ್ಳಿಯಲ್ಲಿ ಕೇವಲ ಹರಿಜನ ಉಮೇದುವಾರನು ಅನುಕೂಲಕ್ಕಾಗಿ ಸ್ಥಳ ಮೂರು ಭಾಗಮಾಡಿ, ಬೇರೆ ಜಿಲ್ಲೆಗೆ ಜೋಡಿಸಲು ಹರಿಜನ ಮುಂದಾಳುಗಳು ಏನು ಕೈವಾಡವೆಂದು ಅಲ್ಲೀ ಸತ್ಯಕೆಯಾಂದು ಆಕ್ಷೇಪವೆತ್ತಿದೆ ; ಈ ಜಿಲ್ಲೆಗೆ 2 ಸ್ಥಳಗಳು ದೂರಯವಷ್ಟು ಜನರಿರುವದರಿಂದ ಹೀಗೆ ಮಾಡುವುದು ಸರಿಯಲ್ಲವೆಂದು ಹೇಳಲಾಗುತ್ತಿದೆ.

ಕಾನಪುರ— ಕಾನಪುರ ನಗರದ ಮಧ್ಯದಲ್ಲಿಯ ಪೋಲೀಸು ಠಾಣೆಯಲ್ಲಿನ ೩ ಜನ ಪೋಲೀಸರು ಕಳೆದ ತಾ ॥ 30 ರಂದು ಕಾನಪುರಕ್ಕೆ ಬಂದ ಪಕ್ಕುಬಾದನ ಹೆಂಡತಿಯ ಮೇಲೆ ಏರಿಹೋದದ್ದಕ್ಕಾಗಿ ಅವರನ್ನು ತೀವ್ರವಾಗಿ ದಂಡಿಸಬೇಕೆಂಬ ಬೇಡಿಕೆಯನ್ನು ಮುಂದೆ ಮಾಡಿ ಸುಮಾರು 1500 ಜನರು ಈ ಠಾಣ್ಯದ ಮುಂದೆ ಮೆರವಣಿಗೆ ಪ್ರದರ್ಶನ ಮಾಡಿದರು ; ೩ ಮಂದಿ ಪೋಲೀಸರು ದಸ್ತಗಿರಿ ಮಾಡಲ್ಪಟ್ಟಿರುವರು.

ಲಾಯದಲ್ಲೂ ಲಾಯರು

——

ಮದರಾಸಿನ ಕಾರ್ಪೊರೇಷನ್ನವರು ಒಂದು ಕಾನೂನು ತಂದಿದ್ದರು. "ಯಾರೂ ಮದ್ರಾಸಿನ ಬೀದಿಗಳಲ್ಲಿ ನಾಲ್ಕು ಕುದುರೆ (ಹಾರ್ಸಿಸ್) ಕಟ್ಟಿದ ಸಾರೋಟಿನಲ್ಲಿ ಹೋಗಕೂಡದು ತಪ್ಪಿದವರಿಗೆ 50 ರೂಪಾಯಿ ದಂಡ ಹಾಕುವುದು" ಎಂದಿತ್ತು ಆ ಕಾನೂನು.

ಒಮ್ಮೆ ಯಾವುದೋ ಒಂದು ಸಣ್ಣ ರಾಜ್ಯದ ದೊರೆ ಮದರಾಸಿಗೆ ಬಂದ ಕುದುರೆ ಸಾರೋಟಿನಲ್ಲಿ ಪೇಟೆಗೆ ಹೊರಟ ಆತನಿಗೆ ಈ ಕಾನೂನು ತಿಳಿಯದು. ಆದರೆ ಪೋಲೀಸಿನವರು ತನ್ನ ಕರ್ತವ್ಯ ಮಾಡದೆ ಉಂಟೆ? ಕುದುರೆಗಳು, ಸಾರೋಟು ಪೋಲೀಸ್ ಠಾಣೆಗೆ ಹೋದುವು. ದೊರೆಯ ಮೇಲೆ ಕೇಸು ಬಿತ್ತು.

ದೊಡ್ಡ ಮರ್ಯಾದೆ ಉಳಿಸಿಕೊಳ್ಳಲು ದೊಡ್ಡ ಲಾಯರನ್ನೇ ಹಿಡಿದ. ಅವರು ಕೇಳಿದ ಒಂದು ಲಕ್ಷ ರೂಪಾಯಿ ಫೀಸು ಕೊಡಲು ಒಪ್ಪಿಬಿಟ್ಟ "ಅಡಕೆಗೆ ಮಾನ ಕಳೆದುಕೊಳ್ಳುವ ಮೊದಲು ಅನೆ ಕೊಡುವುದು ಲೇಸಲ್ಲವೆ?"

ಕೇಸು ಕೆಳಗಿನ ಕೋರ್ಟಿನಲ್ಲಿ ವಿಚಾರಣೆಗೆ ಬಂತು. ದೊರೆಯ ಕಡೆ ಲಾಯರು ಹೋಗಲೇ ಇಲ್ಲ ದೊಡ್ಡ ಲಾಯರು, ಸಣ್ಣ ಕೋರ್ಟಿಗೆ ನೋಡಿ! ದೊರೆಗೆ ತಪ್ಪಿಗಾಗಿ 50 ರೂಪಾಯಿ ದಂಡ ಬಿತ್ತು. ದೊರೆ ಲಾಯರಲ್ಲಿಗೆ ಹೋಗಿ ಪಜೆ ಬಡ್ಡಿಕೊಂಡ. ಕೊಡಬೇಕಾದ ಲಕ್ಷವನ್ನು ಪೂರ್ತಿ ಮುಟ್ಟಿಸಿದ ಲಾಯರು ಮೇಲಿನ ಕೋರ್ಟಿನಲ್ಲಿ ಅಪೀಲು ಹಾಕಿದರು. ವಿಚಾರಣೆಗೆ ಬಂತು. ಲಾಯರು "ಸ್ವಾಮಿ, ನನ್ನ ಕಕ್ಷಿಗಾರ ಸಾರೋಟಿಗೆ ನಾಲ್ಕು ಕುದುರೆ ಕಟ್ಟಿಯೇ ಇಲ್ಲ" ಎಂದರು ಜಡ್ಜಿಗಳು "ನಾವು ನೋಡಿದ್ದೇವೆ. ನಾಲ್ಕು ಕುದುರೆಗಳವೆ ಎಂದರು. ಲಾಯರು "ಇನ್ನೊಮ್ಮೆ ಪರಾಂಬರಿಸೋಣವಾಗಲಿ. ಕಾನೂನಿನಲ್ಲಿರುವಂತೆ ನಾಲ್ಕು ಕುದುರೆಗಳಂತೂ ಅಲ್ಲಿಲ್ಲ. ನನ್ನ ಕಕ್ಷಿಗಾರ ಕಾನೂನಿನ ಪ್ರಕಾರ ತಪ್ಪು ಮಾಡಿಲ್ಲ" ಎಂದರು.

ಜಡ್ಜಿಗಳು ಲಾಯರ ಮಾತಿಗೆ ಬೆಲೆ ಕೊಟ್ಟು ಲಾಯರ್ಕೆ ಹೋದರು ನಾಲ್ಕು ಪ್ರಾಣಿಗಳೂ ಹುಲ್ಲು ತಿನ್ನುತ್ತಿದ್ದವು. "ನೋಡ್ರಿ ನಾಲ್ಕು ಕುದುರೆಗಳು" ಎಂದರು ಜಡ್ಜಿಗಳು. "ಇಲ್ಲ ಸ್ವಾಮಿ ಎರಡು ಗಂಡು ಕುದುರೆ ಎರಡು ಹೆಣ್ಣು ಕುದುರೆ ಇವೆ. ಕಾನೂನಿನಲ್ಲಿ ನಾಲ್ಕು ಗಂಡು ಕುದುರೆ ಎಂದಿದೆ ಎಂದರು ಲಾಯರು.

ಜಡ್ಜರು ಲಾಯರ ಬುದ್ಧಿಗೆ ತಲೆದೂಗಿದರು; ಕೇಸು ವಜಾ ಆಯಿತು; ಆ ಕಾನೂನನ್ನು ಮತ್ತೆ ತಿದ್ದಿದರಂತೆ.

× ಇಂಗ್ಲೀಷಿನಲ್ಲಿ ಗಂಡು ಕುದುರೆಗೆ ಮಾತ್ರ 'ಹಾರ್ಸ್' ಎನ್ನುತ್ತಾರೆ.

— ಕತೆಗಾರ

——



"ಗೋರಕ್ಷಣ"

ಕಾರ್ಯ ಎಲ್ಲೆಲ್ಲೂ ನಡೆಯಲಿ

Protect the Cow

ಉಡ್‌ಲಾಂಡ್

ಶಿ ನ

ಆಕರ್ಷಣ 3 ನೇ ವಾರ

ನಿರೂಪರಾಯ್, ತ್ರಿಲೋಕಕಾಪುರ್ ರಾಂಸಿಂಗ್, ದುರ್ಗಾಖೋಟೆ ಪಾತ್ರವಹಿಸಿರುವ ಅತ್ಯದ್ಭುತ ಆಕರ್ಷಣೀಯ, ವನಮೋಹನ ಚಿತ್ರರತ್ನ (ಹಿಂದಿ)

ಬೀಮಸೇನ್

BHIMSEN

ಪ್ರತಿದಿನ 2 ಪ್ರದರ್ಶನಗಳು

— ವಂದಿನ ವಿನೋದ! —

ಉನ್ಮಾದ

ಪೆಡ್ರೋ

ಅತಿ ಸಾಹಸಮಯ ಹಿಂದಿ ಚಿತ್ರ

Announcement

Theatre building old materials and furniture are being sold very cheap.

Apply to—
NEW OPERA TALKIES
MYSORE

ಸಿನೆಮಾ ಕಟ್ಟಡದ ಹಳೇ ಸಾಮಾನುಗಳೂ ಫರ್ನೀಚರುಗಳೂ ಸುಲಭ ಬೆಲೆಗೆ ಮಾರಾಟಕ್ಕಿವೆ.

ವಿವರಗಳಿಗೆ—
ನ್ಯೂ ಅಪೇರಾ ಟಾಕೀಸ್
ಮೈಸೂರು

ಸತ್ಯವಾದಿ

ದಿನಪತ್ರಿಕೆ ತಿಂಗಳಿಗೆ 6 ಆಣೆಗಳು

ಪರಸ್ಥಳಕ್ಕೆ ಅಂಚೆವೆಚ್ಚ ಸೇರಿ 12 ಆಣೆ

Edited, Printed and Published by M. S. Krishna Rao, at the Satyavadi Press Chamarajpuram Mysore

ನ್ಯೂಸೂರು ಶಿವರಾಂಪೇಟೆ

ಈವನಿಂಗ್ ಬಜಾರ್‌ನಲ್ಲಿರುವ

ಜಯಲಕ್ಷ್ಮಿ ಪ್ರಿಂಟಿಂಗ್ ವರ್ಕ್ಸ್

ನಲ್ಲಿ ಮುದ್ರಣಕಲಸಗಳು ಸುಂದರವಾಗಿಯೂ, ಸಕಾಲದಲ್ಲೂ, ಸುಲಭಭಾರ್ಜಿನಲ್ಲೂ ಮಾಡಿಕೊಡಲಾಗುವುದೆಂಬುದು ನಿಮ್ಮ ಜ್ಞಾಪಕದಲ್ಲಿರಲಿ

ಸತ್ಯವಾದಿ ಸೋಮವಾರ ಸಂಚಿಕೆ

ಶ್ರೀ ದ್ವಾರಕಾ ಜಗದ್ಗುರುಗಳವರ

ಉದಾತ್ತಾಶ್ರಯದಲ್ಲಿ ಪ್ರಕಟವಾಗುವ

- ಪ ಬೋ ಧ -

ಧಾರ್ಮಿಕ ಸಪ್ತಾಹಿಕವನ್ನೊಳಗೊಂಡಿದೆ

ವಾರ್ಷಿಕ ಚಂದಾ
ಅಂಚೆವೆಚ್ಚ ಸಮೇತ 1-14-0

ರಣಜಿತ್

ವೈಭವ 4 ನೇ ವಾರ

ರೆಹನಾ, ಯಾಕೂಬ್, ಪ್ರೇಮನಾಥ್ ಗೋವ ಪಾತ್ರವಹಿಸಿರುವ

ನಗಾಯಿ

ಪ್ರತಿದಿನ 3 ಆಟಗಳು

8-6-51 ರಿಂದ

ರಾಜರಾಣಿ